ವಿಜ್ಞಾನವನ್ನು ಓದಿಕೊಂಡು ಸಾಹಿತ್ಯದ ಒಲವು ಬೆಳೆಸಿಕೊಂಡಿರುವ ಮಧುರಾ ಕರ್ಣಮ್ ಮೂಲತಃ ಬೆಳಗಾವಿಯವರು. ಪ್ರಸ್ತುತ ಬೆಂಗಳೂರು ನಿವಾಸಿ. ಕಥೆ, ಕವನ, ಪ್ರಬಂಧಗಳ ಪ್ರಕಾರದಲ್ಲಿ ಅವರು ಹದಿನಾರು ಕೃತಿಗಳನ್ನು ಪ್ರಕಟಿಸಿದ್ದಾರೆ.

ಹೀಗಾಗಿ, ನಾವು ಚಡ್ಡಿ ಹಾಕುವ ಮೊದಲೇ ದೋಸ್ತರು.

ದೊಡ್ಡದಾದ ನಾಲ್ಕು ಕೋಣೆಗಳಿದ್ದ ಶಾಲೆ ನಮ್ಮದು. ಕುಳಿತುಕೊಳ್ಳಲು ಫಳಿಗಳಿದ್ದವು. ಒಂದೇ ಕೋಣೆಯಲ್ಲಿ ಮೂರು ತರಗತಿಗಳು ನಡೆಯುತ್ತಿದ್ದವು. ಪೂರ್ವಕ್ಕೆ ತಿರುಗಿದರೆ ಎರಡನೇ ಇಯತ್ತೆ, ಪಶ್ಚಿಮಕ್ಕೆ ತಿರುಗಿದರೆ ಮೂರನೇ ಇಯತ್ತೆ, ಉತ್ತರಕ್ಕೆ ತಿರುಗಿದರೆ ಒಂದನೇ ಇಯತ್ತೆ... ದಕ್ಷಿಣಕ್ಕೆ ಬಾಗಿಲು. ಎರಡನೇ ಫಳಿಯ ಮೇಲೆ ಇನ್ನಿಬ್ಬರ ಜೊತೆ ನಾವಿಬ್ಬರು ಕುಳಿತುಕೊಳ್ಳುತ್ತಿದ್ದೆವು. ಅಚ್ಚುತ ಮಗ್ಗಿ ತಪ್ಪಿದರೆ ನಾನೂ ತಪ್ಪುತ್ತಿದ್ದೆ. ಗಣಿತ ಕಲಿಸುತ್ತಿದ್ದ ಭರಮಣ್ಣ ಮಾಸ್ತರು 'ಓಹೋ! ಭಾರಿ ಜೀವದ ಗೆಳ್ಯಾರಿವರು. ಕೃಷ್ಣ, ಸುಧಾಮನ್ಹಂಗ... ಒಬ್ಬಾಂವಾ ತಪ್ಪಿದರ ಇನ್ನೊಬ್ಬಾಂವನೂ ತಪ್ಪತಾನ' ಎಂದು ಛೇಡಿಸುತ್ತಿದ್ದರು. ಇಬ್ಬರಿಗೂ ಕೋಪ ಉಕ್ಕಿತು. ಹಚ್ಚೆ ಹಾಕಲು ಬರುತ್ತಿದ್ದ ಮುದುಕಿಯ ಬಳಿ ಹೋಗಿ ಹಚ್ಚೆ ಹಾಕಿಸಿಕೊಂಡಿದ್ದೆವು. ಅವನ ಬೆನ್ನಿನ ಮೇಲೆ 'ಚಿದು' ಎಂದಿದ್ದರೆ ನನ್ನ ಬೆನ್ನಿನ ಮೇಲೆ 'ಅಚ್ಚು' ಎಂದಿತ್ತು. ಅಚ್ಚುತನೇ ಎಂಟಾಣೆ ಕೊಟ್ಟಿದ್ದ. ಹಲ್ಲು ಕಚ್ಚಿಕೊಂಡು ನೋವು ಸಹಿಸಿಕೊಂಡಿದ್ದೆವು. ಮರುದಿನ ಎಲ್ಲರಿಗೂ ಅಂಗಿ ಎತ್ತಿ ತೋರಿಸಿದ್ದೇ ಬಂತು. ಭರಮಣ್ಣ ಮಾಸ್ತರು ನೋಡಿ ಹಣೆಗೆ ಕೈ ಇಟ್ಟುಕೊಂಡು ನಕ್ಕಿದ್ದರು. ಮನೆಯಲ್ಲೂ 'ಯಾರು ಹೇಳಿದ್ದಾರು ನಿಮಗ ಈ ಉಸಾಬರಿ...' ಎಂದು ಬೈಯುತ್ತಲೇ ಅಮ್ಮ ಕೊಬ್ಬರಿ ಎಣ್ಣೆ ಹಚ್ಚಿ ತಿಕ್ಕಿದ್ದಳು. ಊಟವೂ ಅಷ್ಟೇ... ಎಲ್ಲಿರುತ್ತಿದ್ದೆವೋ ಅಲ್ಲಿ ಆಗುತ್ತಿತ್ತು. ನಮ್ಮ ಗೋಲಿಯಾಟದಿಂದ ಮಣ್ಣಿನ ರಸ್ತೆಗಳೆಲ್ಲ ತೆಗ್ಗು ತೋಡಿಕೊಂಡಿದ್ದವು. ಶೂರ್ಪಾಲಿಯ ಉತ್ಸವದಲ್ಲಿ ಇಬ್ಬರೂ ಊಟ ಬಡಿಸುತ್ತ 'ನರಸಿಂಹ ಮಂತ್ರ ಒಂದಿರಲು ಸಾಕು...' ಎಂದು ಹಾಡು ಹೇಳುವುದಿತ್ತು. ಈಜು ನಮ್ಮ ಪ್ರೀತಿಯ ಹವ್ಯಾಸವಾಗಿತ್ತು. ಅದರಲ್ಲೂ ಅಚ್ಚು ನನಗಿಂತ ಚೆನ್ನಾಗಿ ಮೀನಿಗೆ ಸವಾಲು ಹಾಕುವಂತೆ ಈಜುತ್ತಿದ್ದ. ಅಂಥವನು ಕೃಷ್ಣೆಯ ಸುಳಿಗೆ ಸಿಲುಕಿದನೆಂದರೆ... ಇಂದಿಗೂ ನಂಬಲಾಗುವುದಿಲ್ಲ.

ಅಚ್ಚುತನ ದೊಡ್ಡಣ್ಣ ಕೃಷ್ಣನ ಮದುವೆ ವೈಭವದಿಂದಲೇ ನಡೆದಿತ್ತು. ವಾರದವರೆಗೆ ಸಿಹಿಯೂಟ ಉಂಡು ಊರಿಗೆ ಊರೇ ತಣಿದಿತ್ತು. ವೈನಿ ಒಳ್ಳೆಯವರೇ. ಅಚ್ಚುತನೊಂದಿಗೆ ನನ್ನನ್ನೂ ಚೆನ್ನಾಗೇ ಮಾತನಾಡಿಸುತ್ತಿದ್ದರು. ತವರುಮನೆಯೂ ಗಟ್ಟಿಯಾಗಿತ್ತು. ತಂದೆ ಐನಾಪುರದಲ್ಲೇ ಗಟ್ಟಿ ಕುಳ. ನಾಲ್ವರು ಅಣ್ಣಂದಿರು. ಅವರ ಮದುವೆ ಖರ್ಚಿನಲ್ಲಿ ನನ್ನ ಇಬ್ಬರು ಅಕ್ಕಂದಿರ ಮದುವೆಯಾಗಿತ್ತು... ಸರಳವಾಗಿ. ಅಣ್ಣನ ಮದುವೆಯೂ ಆಗಿ ಆರ್ಥಿಕ ಸ್ಥಿತಿ ಪಾತಾಳ ಕಂಡಿತ್ತು. ಇದಾವುದೂ ನಮ್ಮ ಗೆಳೆತನಕ್ಕೆ ಧಕ್ಕೆ ತಂದಿರಲಿಲ್ಲ. ಮೋಹನಣ್ಣನ ಮದುವೆ ಕಷ್ಟವೇ ಆಯಿತು. ಸೊಂಟದ ಭಾಗ ಸ್ವಲ್ಪ ಕುಬ್ಜವಾಗಿ ವಿಚಿತ್ರವಾಗಿ ಕಾಣುತ್ತಿದ್ದನವ. ಗೊತ್ತಿದ್ದವರಾರೂ ಕನ್ಯೆ ಕೊಡಲಿಲ್ಲ. ಪದ್ದಕ್ಕ ಅದೆಷ್ಟು ಬಾರಿ ಶೂರ್ಪಾಲಿ ನರಸಪ್ಪನಿಗೆ ಹರಸಿಕೊಂಡಳೋ... ಕೊನೆಗೆ ಕಡುಬಡವರಾದ ಸುಶೀಲಾಳ ಸಂಬಂಧ ಬಂದಿತ್ತು. ವಧುವಿಗೆ ಚಿನ್ನವನ್ನಿಟ್ಟು ಮದುವೆಯನ್ನೂ ತಾವೇ ಮಾಡಿಕೊಂಡರು ಮಾಧವರಾಯರು. ಸುಶೀಲಾ ಎರಡನೇ ಸೊಸೆಯಾಗಿ ಅವರ ಮನೆಗೆ ಕಾಲಿಟ್ಟಿದ್ದಳು. ನನ್ನ ವೈನಿಯ ಶೀಮಂತದ ಮರುದಿನವೇ ಅವನ ದೊಡ್ಡ ಅತ್ತಿಗೆಯ ಶೀಮಂತವಾಯಿತು. ಇಬ್ಬರನ್ನೂ ತವರುಮನೆಗೆ ಬಾಣಂತನಕ್ಕಾಗಿ ಕಳಿಸಿದ್ದಾಯಿತು. ಇಬ್ಬರಿಗೂ ಹೆಣ್ಣುಮಕ್ಕಳು ಜನಿಸಿದರು. 'ಪೆಹಲಿ ಬೇಟಿ... ತೂಪ ರೋಟಿ' ಎನ್ನುತ್ತ ಎಲ್ಲೆಡೆ ಹರ್ಷದ ಹೊನಲು ಹರಿದಿತ್ತು. ಆದರೆ, ವಿಧಿಗೆ ಸೈರಿಸಲಾಗಲಿಲ್ಲವೇನೊ... ಮನೆಯ ಆಧಾರಸ್ತಂಭದಂತಿದ್ದ ಮಾಧವರಾಯರಿಗೆ ಲಕ್ವಾ ಹೊಡೆಯಿತು. ಆಸ್ಪತ್ರೆಯ ಓಡಾಟವಾದರೂ ಔಷಧಗಳು ಕೆಲಸ ಮಾಡಲಿಲ್ಲ. ಒಂದೇ ತಿಂಗಳಲ್ಲಿ ಹಣ್ಣಾಗಿ ತಮ್ಮ ಇಹಲೋಕಯಾತ್ರೆ ಮುಗಿಸಿದರು. ಪದ್ದಕ್ಕ ಭೂಮಿಗಿಳಿದು ಹೋದರು. ಕೃಷ್ಣ ತಾಯಿಗೆ ಧೈರ್ಯ ಕೊಟ್ಟು ಮನೆಯನ್ನು ಸಂಭಾಳಿಸಿದ. ಸುಶೀಲಾ ಮನೆಯನ್ನು ನೋಡಿಕೊಂಡು ಒಳಗು...